**ಪೀಠಿಕೆ**

# ಬೈಬಲಿನಲ್ಲಿ ಬಾಪ್ತಿಸ್ಮ

> *"ಆಗ ಯೇಸು ಹತ್ತರಕ್ಕೆ ಬಂದು - ಪರಲೋಕದಲ್ಲಿಯೂ ಭೂಲೋಕ ದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾಯ 28:18-20).*

ಬೈಬಲಿನಲ್ಲಿ, ವಿಶ್ವಾಸದ ಪ್ರಯೋಜನೆಗಳು ಬಾಪ್ತಿಸ್ಮದೊಂದಿಗೆ ಸಂಬಂಧಿಸಿರುವಷ್ಟು, ಬಾಪ್ತಿಸ್ಮವು ನಂಬಿಕೆಯೊಂದಿಗೆ ಕೂಡಿಸಲ್ಪಟ್ಟಿರುತ್ತದೆ. ಈ ಕಾರಣದಿಂದ ಬಾಪ್ತಿಸ್ಮವು ನಂಬಿಕೆಯಿಂದ ಬೇರ್ಪಡಿಸಲ್ಪಡಲಾರದು - ಇಲ್ಲವೇ ನಂಬಿಕೆಯು ಬಾಪ್ತಿಸ್ಮದಿಂದ ಬೇರ್ಪಡಿಸಲ್ಪಡಲಾರದು. ಒಬ್ಬನು ಕ್ರೈಸ್ತನಾಗುವ ವಿಧಾನವನ್ನು ಕುರಿತು ಇನ್ನೊಂದಿಲ್ಲದೇ ಒಂದನ್ನು ಚರ್ಚಿಸಲಾಗದು, ಮತ್ತು ರಕ್ಷಣೆಯ ಆಶೀರ್ವಾದಗಳು ಒಂದನ್ನು ಬಿಟ್ಟು ಇನ್ನೊಂದರೊಂದಿಗೆ ಸಂಬಂಧಿಸಲ್ಪಡಲಾರವು.

ನ್ಯೂ ಜೆರೂಸಲೇಮ ಬೈಬಲಿನಲ್ಲಿ ಅಡಿ ಟಿಪ್ಪಣೆಯು ಹೀಗೆ ಹೇಳುತ್ತದೆ,

> ಬಾಪ್ತಿಸ್ಮವು ನಂಬಿಕೆಯೊಂದಿಗೆ ವಿರೋಧವಾಗಿ ಇಡಲ್ಪಟ್ಟಿರುವದಿಲ್ಲ, ಆದರೆ ಅದರೊಂದಿಗೆ ಹೋಗುತ್ತದೆ, … ಪೌಲನು ನಂಬಿಕೆಗೆ ಮತ್ತು ಬಾಪ್ತಿಸ್ಮಕ್ಕೆ ಒಂದೇ ಪರಿಣಾಮಗಳನ್ನು ಹೋಲಿಸುತ್ತಾನೆ … . ಪಾಪಿಯು ನೀರಿನಲ್ಲಿ ಮುಳು ಗೇಳಿಸಲ್ಪಡುತ್ತಾನೆ … ಮತ್ತು ಹೀಗೆ ಕ್ರಿಸ್ತನೊಂದಿಗೆ "ಹೂಣಲ್ಪಡುತ್ತಾನೆ" … . [ನೋಡಿರಿ ಗಲಾತ್ಯ 3:26; ಕೊಲೊಸ್ಸೆ 2:12.][1]

ಬೈಬಲಿನ ದೃಷ್ಟಿಕೋನದಿಂದ ಬಾಪ್ತಿಸ್ಮದ ಜಾಗರೂಕತೆಯ ಅಧ್ಯಯನವು, ನಂಬಿಕೆಗೆ ಬಾಪ್ತಿಸ್ಮದ ಸಂಬಂಧದ ಕಾರಣದಿಂದ ಅವರ ಮಹತ್ವವನ್ನು ದೃಢಪಡಿಸುತ್ತದೆ.

ಈ ಅಧ್ಯಯನದಲ್ಲಿ ತೊಡಗುವ ಪ್ರತಿಯೊಬ್ಬನು ತೆರೆದ ಮನಸ್ಸಿನೊಂದಿಗೆ ಮತ್ತು ತೆರೆದ ಪುಸ್ತಕ - ಬೈಬಲಿನೊಂದಿಗೆ ಹಾಗೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇದು ಬಾಪ್ತಿಸ್ಮವನ್ನು ಕುರಿತ ಬೈಬಲ್ ಬೋಧನೆಯ ಆಸಕ್ತಿಯುಳ್ಳ ಅಧ್ಯಯನಕ್ಕೆ ಮತ್ತು ಆಲೋಚನೆಗೆ ನಡಿಸುವುದು.

---

ಟಿಪ್ಪಣಿ

[1]Henry Wansbrough, gen. ed., The New Jerusalem Bible (New York: Doubleday, 1985), 1875, n6a.



© 2009 Truth for Today